# ನೀನೇ ಗತಿ ನೀನೆ ಮತಿ ನೀನೆ ಸ್ವಾಮಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 344.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 218.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 110.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are same as in Ref. 1 except few minor differences which are not considered here.
5. **Note:** This song is not available in the books of Gorebala Hanumantha Rayaru.
6. **Note:** Ankita is different in Ref. 1 & Ref. 3. We have considered Ref.1 as standard and taken that Ankita for listing.
7. **Note:** Singer has followed these lyrics given here.

ರಾಗ: ಪೂರ್ವಿ ತಾಳ: ಝಂಪೆ

ನೀನೆ ಗತಿ ನೀನೆ ಮತಿ ನೀನೆ ಸ್ವಾಮಿ
ನೀನಲ್ಲದನ್ಯತ್ರ ದೈವಗಳ ನಾನರಿಯೆ || ಪ ||

ನಿನ್ನ ಪಾದಾರವಿಂದದ ಸೇವೆಯ ಮಾಡಿ
ನಿನ್ನ ಧ್ಯಾನದಲಿರುವ ಹಾಗೆ ಮಾಡು
ನಿನ್ನ ದಾಸರ ಸಂಗದಿಂದ ದೂರಿಡದೆನಗೆ
ಸನ್ಮಾರ್ಗದಿರಿಸೊ ಜಗದೀಶ ಅಘನಾಶ || 1 ||

ಕಮಲನಾಭಿಯಲಿ ಬೊಮ್ಮನ ಪುಟ್ಟಿಸಿದೆ ಹರಿಯೆ
ಕಮಲಸಖ ಕೋಟಿಪ್ರಕಾಶ ಈಶ
ಕಮಲಕರತಳದೆ ಅಭಯವನಿತ್ತು ಭಕುತರಿಗೆ
ಕಮಲಾಕ್ಷನೆನಿಸಿದೆಯೊ ಕಮಲಾರಮಣ || 2 ||

ಶಿಶುಪಾಲ ದಂತವಕ್ತ್ರರ ಶಿರವ ಛೇದಿಸಿದೆ
ಪಶುಪತಿಯ ಆಭರಣವೈರಿವಾಹನನೆ
ಅಸುರಕುಲ ಸಂಹರಿಸಿ ಭಕ್ತಜನರನು ಪೊರೆದೆ
ವಸುಧೇಶ ಪುರಂದರವಿಠಲರಾಯ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಗತಿ** – ಮುಕ್ತಿಯನ್ನು ಕೊಡುವವನು.

**ಮತಿ** – ಬುದ್ಧಿಗೆ ಪ್ರೇರಕ.

**ಅನ್ಯತ್ರದೈವಗಳ** – ಬೇರೆಡೆಯಿರುವ ದೇವತೆಗಳನ್ನು; ತತ್ತ್ವೇಶರೆಲ್ಲ ಹರರಿಯಿಂದಲೇ ವ್ಯಾಪ್ತರು, ಹರಿಗೆ ಅಧೀನರು.

**ದೂರಿಡದೆನಗೆ** – ದೂರ ಹೋಗದಂತೆ ಮಾಡಿ, ನನಗೆ.

**ಅಘನಾಶ** – ಪಾಪಗಳನ್ನು ತೊಲಗಿಸುವವನು.

**ಕಮಲಸಖ** – ಸೂರ್ಯ.

**ಕಮಲ ಕರತಳದೆ** – ತಾವರೆಯಂತಿರುವ ಕೈಗಳಿಂದ (ಅಭಯ ಮುದ್ರೆ).

**ಶಿಶುಪಾಲ – ದಂತವಕ್ತ್ರರ...** – ಶಿಶುಪಾಲ ಚೇದಿರಾಜ, ವಸುದೇವನ ತಂಗಿಯ ಮಗ; ದಂತವಕ್ತ್ರ ಕರೂಶದೇಶದ ರಾಜ, ಶಿಶುಪಾಲನ ಮಿತ್ರ; ಯುಧಿಷ್ಠಿರನು ಕೃಷ್ಣನಿಗೆ ಅಗ್ರಪೂಜೆ ಮಾಡಿದ ಸಂದರ್ಭದಲ್ಲಿ ಇವರಿಬ್ಬರೂ ಕೃಷ್ಣನನ್ನು ಎದುರಿಸಿ ಅವನಿಂದ ಕೊಲ್ಲಲ್ಪಟ್ಟರು.

**ಪಶುಪತಿಯ ಆಭರಣ ವೈರಿವಾಹನ** – ಶಿವನ ಆಭರಣ ಹಾವು; ಹಾವಿನ ಹಗೆ ಗರುಡ; ಗರುಡನನ್ನೇರಿ ಹೋಗುವವನು.

**Classification:** Keerthane
**Ankita:** purandara vittala
**Location:** NA

**Category:** Pooja Tatva
**Sub-Category:** mukti, buddi, Dhyana, jagadisha, padma, brahma, Krishna, surya, kai, shishupala, shiva, abharana, shatru, garuda, asura, papa,
**Pravachana:** NA
**Explanation:** Pandith Parashuram Betageri, Bengaluru.